## ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 233

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : 16.07.2024

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು; (ಜಿಲ್ಲಾವಾರು / ತಾಲ್ಲೂಕುವಾರು ಮಾಹಿತಿ ನೀಡುವುದು) | 2019–20ನೇ ಸಾಲಿನ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 54791 ಕೈಮಗ್ಗ ನೇಕಾರರು ಇರುತ್ತಾರೆ ಹಾಗೂ 2021–22ನೇ ಸಾಲಿನಲ್ಲಿ Academy of Management Studies New Delhi ಗಣತಿಯ ಪ್ರಕಾರ ರಾಜ್ಯದಲ್ಲಿ 1,17,099 ವಿದ್ಯುತ್ ಮಗ್ಗ ನೇಕಾರರು ಇರುತ್ತಾರೆ. ಕೈಮಗ್ಗ /ವಿದ್ಯುತ್ ಮಗ್ಗ ನೇಕಾರರ ಜಿಲ್ಲಾವಾರು / ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ–1** ರಲ್ಲಿ ಹಾಗೂ **ಅನುಬಂಧ–2** ರಲ್ಲಿ ಒದಗಿಸಿದೆ. |
| (ಆ) | ರಾಜ್ಯದ ನೇಕಾರರಿಗೆ ಕಾರ್ಮಿಕರ ಕಾರ್ಡ್ ವಿತರಿಸುವ ರೀತಿಯಲ್ಲಿ ನೇಕಾರರ ಕಾರ್ಡ್ ವಿತರಿಸುವ ಬಗ್ಗೆ ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | ರಾಜ್ಯದ ನೇಕಾರರಿಗೆ ಕಾರ್ಮಿಕರ ಕಾರ್ಡ್ ವಿತರಿಸುವ ರೀತಿಯಲ್ಲಿ 2019–20ನೇ ಸಾಲಿನ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ನೇಕಾರರ ಸೇವಾ ಕೇಂದ್ರ, ಭಾರತ ಸರ್ಕಾರ, ಬೆಂಗಳೂರು ಇವರಿಂದ 47,883 ಕೈಮಗ್ಗ ನೇಕಾರರಿಗೆ ಪೆಹಚಾನ್ ಕಾರ್ಡ್‌ನ್ನು ವಿತರಿಸಲಾಗಿದೆ ಹಾಗೂ 1,17,099 ವಿದ್ಯುತ್ ಮಗ್ಗ ನೇಕಾರರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ. |
| (ಇ) | ನೇಕಾರರಿಗೆ ಸರ್ಕಾರದಿಂದ ಉಚಿತ ವಿದ್ಯುತ್ ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು; ನಿವೇಶನ ರಹಿತ ನೇಕಾರರಿಗೆ ನಿವೇಶನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | 2023–24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ–265 ರಲ್ಲಿ ಘೋಷಿಸಿದಂತೆ, 1 ರಿಂದ 10 ಹೆಚ್.ಪಿ.ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ Energy Charges + Fixed Charges (FC) + Fuel adjustment Charges (FAC)+ Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಸರ್ಕಾರದಿಂದ ಭರಿಸಿ "ಶೂನ್ಯ ಬಿಲ್" ನೀಡಲಾಗುತ್ತಿದೆ. 10.01 ರಿಂದ 20 ಹೆಚ್.ಪಿ. ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಈ ಹಿಂದೆ ನೀಡಿದಂತೆ Energy Charges ನ ಮೊತ್ತದಲ್ಲಿ ಪ್ರತಿ ಯೂನಿಟ್‌ಗೆ ರೂ.1.25/– ಗಳನ್ನು ಘಟಕ ಒಂದಕ್ಕೆ ಮಾಸಿಕ ಗರಿಷ್ಠ 500 ಯೂನಿಟ್ ಗಳ ವರೆಗೆ ಮಾತ್ರ ಘಟಕದವರು ಪಾವತಿಸುವುದು ಹಾಗೂ ಉಳಿಕೆ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ. ಉಳಿದಂತೆ ಈ ಘಟಕಗಳಿಗೆ 10.01 ರಿಂದ 20 ಹೆಚ್.ಪಿ. ವರೆಗೆ Fixed Charges (FC) + Fuel adjustment Charges (FAC)+ Tax ಮೊತ್ತವನ್ನು ನೇಕಾರರೇ ಭರಿಸತಕ್ಕದ್ದು. ಮಾಸಿಕ 500 ಯೂನಿಟ್ ಮೇಲ್ಪಟ್ಟು Energy Charges ಹಾಗೂ Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಘಟಕದವರೇ ಭರಿಸತಕ್ಕದ್ದು ಎಂದು ಸರ್ಕಾರದ ಆದೇಶ ಸಂಖ್ಯೆ: CI/37/JAKY/2023 ದಿನಾಂಕ:20.10.2023 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.<br>ನಿವೇಶನ ರಹಿತ ನೇಕಾರರಿಗೆ ನಿವೇಶನ ನೀಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| (ಈ) | ರಾಜ್ಯದ ನೇಕಾರರಿಗೆ ಕಚ್ಚಾ ವಸ್ತುಗಳನ್ನು ಸರ್ಕಾರದಿಂದಲೇ ಪೂರೈಸುವ ಬಗ್ಗೆ ಹಾಗೂ ನೇಕಾರರಿಂದ ನೇರವಾಗಿ ಸೀರೆ / ಯುನಿಫಾರಂ ಸೇರಿದಂತೆ ಇತರೆ ವಸ್ತುಗಳನ್ನು ಖರೀದಿ ಮಾಡುವ ಬಗ್ಗೆ ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ 3,757 ನೇಕಾರರು ನೋಂದಾಯಿತರಾಗಿದ್ದು, ನೋಂದಾಯಿತ ಕೈಮಗ್ಗ ನೇಕಾರರಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ ಹಾಗೂ ನೇಕಾರರು ಉತ್ಪಾದಿಸಿದ ಸಮವಸ್ತ್ರ ಬಟ್ಟೆಯನ್ನು ಸಂಗ್ರಹಣೆ ಮಾಡುವ ಜವಾಬ್ದಾರಿಯನ್ನು ನಿಗಮವೇ ನಿರ್ವಹಿಸುತ್ತಿದೆ. ನಿಗಮದಲ್ಲಿ ಉತ್ಪಾದನೆಯಾಗುವ ಶೇ.90 ರಷ್ಟು ಬಟ್ಟೆಯನ್ನು ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಶಿಕ್ಷಣ ಇಲಾಖೆಗೆ ಪೂರೈಸಲಾಗುತ್ತಿದೆ ಮತ್ತು ನೇಕಾರರು ಉತ್ಪಾದಿಸಿದ ಬೆಡ್ ಶಿಟ್, ಟಾವೆಲ್ಸ್, ನ್ಯಾಪಕಿನ್ಸ್, ಕಾಟನ್ ಲುಂಗಿಗಳು, ರೇಷ್ಮೆ ಸಾಂಪ್ರದಾಯಿಕ ಸೀರೆಗಳು, ರೇಷ್ಮೆ ಸಾದಾ ಬಟ್ಟೆ ಇತ್ಯಾದಿ ವಸ್ತ್ರಗಳನ್ನು ನೇಕಾರರಿಂದ ಸಂಗ್ರಹಿಸಿ ನಿಗಮದ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಮುಖಾಂತರ ಮಾರಾಟ ಮಾಡುವ ಮೂಲಕ ಮಾರುಕಟ್ಟೆ ಜವಾಬ್ದಾರಿಯನ್ನು ಕೂಡಾ ನಿಗಮವೇ ವಹಿಸಿ ಕೊಂಡಿರುತ್ತದೆ. 2023-24ನೇ ಸಾಲಿನಲ್ಲಿ 12.27 ಕೋಟಿ ಮೌಲ್ಯದ 3.25 ಲಕ್ಷ ಕೆ.ಜಿ ಕಚ್ಚಾ ಮಾಲನ್ನು ನೇಕಾರರಿಗೆ ಪೂರೈಸಿದ್ದು 25.19 ಲಕ್ಷ ಮೀ. ಬಟ್ಟೆಯನ್ನು ಉತ್ಪಾದಿಸಲಾಗಿರುತ್ತದೆ. |
| (ಉ) | ನೇಕಾರರ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರ ಸಂಘ-ಸಂಸ್ಥೆಗಳಲ್ಲಿ ತೆಗೆದುಕೊಂಡಿರುವ ಸಾಲವನ್ನು ರಾಜ್ಯ ಸರ್ಕಾರ ಸಾಲ ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | ನೇಕಾರರು ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರ ಸಂಘ- ಸಂಸ್ಥೆಗಳಲ್ಲಿ ತೆಗೆದುಕೊಂಡಿರುವ ಸಾಲವನ್ನು ರಾಜ್ಯ ಸರ್ಕಾರ ಸಾಲ ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.<br><br>ಹಿಂದಿನ ವರ್ಷಗಳಲ್ಲಿ ನೇಕಾರರು ಸಹಕಾರ ಸಂಘ / ಸಂಸ್ಥೆಗಳಲ್ಲಿ ತೆಗೆದುಕೊಂಡಿರುವ ಸಾಲವನ್ನು ರಾಜ್ಯ ಸರ್ಕಾರ ಸಾಲ ಮನ್ನಾ ಮಾಡಿರುವ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| (ಊ) | ನೇಕಾರರ ಕುಟುಂಬದ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಉಚಿತ ಉನ್ನತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಬಂದಿರುವುದಿಲ್ಲ. |
| (ಋ) | ನೇಕಾರರ ಮಕ್ಕಳಿಗೆ ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಇದೆಯೇ; ಇಲ್ಲದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ಬೆಂಗಳೂರು ದಿನಾಂಕ:19-06-2021 & 12-11-2021 ರ ಆದೇಶಗಳನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗದ ವಸತಿ ಶಾಲೆಗಳಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶೇ.75 ರಷ್ಟು ಪರಿಶಿಷ್ಟ ಜಾತಿ ಶೇ.15 ರಷ್ಟು ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೇ.10 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ. |

ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಸೀಟುಗಳು ಕೆಳಕಂಡಂತೆ ಮೀಸಲಿಡಲಾಗಿದೆ.

| ವಸತಿ ಶಾಲೆ | 50 ಸಂಖ್ಯಾಬಲವುಳ್ಳ ವಸತಿ ಶಾಲೆಗಳು |
|---|---|
| ಪ.ಜಾತಿಗೆ ಮೀಸಲಿರಿಸಿದ ಸೀಟುಗಳು | 07 |
| ಪ.ಪಂಗಡಕ್ಕೆ ಮೀಸಲಿರಿಸಿದ ಸೀಟುಗಳು | 05 |
| ಹಿಂ. ವರ್ಗಕ್ಕೆ ಮೀಸಲಿರಿಸಿದ ಸೀಟುಗಳು | 38 |
| **ಒಟ್ಟು** | **50** |

ಮೇಲ್ಕಂಡಂತೆ ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೀಸಲಾದ ಶೇ.75 ರಷ್ಟು (38 ಸೀಟುಗಳು) ಸೀಟುಗಳಲ್ಲಿ ಅಂದರೆ 50 ದಾಖಲಾತಿ ಮಾಡುವ ಶಾಲೆಗಳಲ್ಲಿ 38 ಸೀಟುಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿರಿಸಲಾಗಿದ್ದು, ಈ ಪೈಕಿ 2ಎ ಪ್ರವರ್ಗದವರಿಗೆ ಮೀಸಲಾತಿಗೆ ಅನುಗುಣವಾಗಿ 17 ಸೀಟುಗಳಿಗೆ ಮೀಸಲಿರಿಸಲಾಗಿದೆ.

ನೇಕಾರರ ಮಕ್ಕಳಿಗೆ ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ ಪ್ರತ್ಯೇಕ ಮೀಸಲಾತಿ ಕಲ್ಪಿಸುವ ಕುರಿತು ಸರ್ಕಾರದ ನೀತಿಗೆ ಒಳಪಟ್ಟಿರುತ್ತದೆ.

ಸಂಖ್ಯೆ: CI 126 JAKE 2024

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಅನುಬಂಧ-1

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 233 ಕ್ಕೆ ಮಾಹಿತಿ**

**2019-20 ನೇ ಸಾಲಿನ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿನ ಕೈಮಗ್ಗ ನೇಕಾರರು ಸಂಖ್ಯೆ**

| ಕ್ರ.ಸಂ | ಜಿಲ್ಲೆಯ ಹೆಸರು | ಕ್ರ.ಸಂ | ತಾಲ್ಲೂಕು | ಕೈಮಗ್ಗ ನೇಕಾರರ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 1 | ಬದಾಮಿ | 1501 |
| | | 2 | ಬಾಗಲಕೋಟೆ | 1080 |
| | | 3 | ಬೀಳಗಿ | 334 |
| | | 4 | ಗುಳೇದಗುಡ್ಡ (TMC) | 893 |
| | | 5 | ಹುನಗುಂದ | 5575 |
| | | 6 | ಇಲಕಲ್ (TMC) | 2153 |
| | | 7 | ಜಮಖಂಡಿ | 1182 |
| | | 8 | ಮುಧೋಳ | 504 |
| 2 | ಬಳ್ಳಾರಿ | 1 | ಬಳ್ಳಾರಿ | 246 |
| | | 2 | ಹಡಗಲಿ | 165 |
| | | 3 | ಹಗರಿಬೊಮ್ಮನಹಳ್ಳಿ | 96 |
| | | 4 | ಹೊಸಪೇಟೆ | 17 |
| | | 5 | ಕುಡ್ಲಿಗಿ | 2476 |
| | | 6 | ಸಿರುಗುಪ್ಪ | 23 |
| | | 7 | ತೆಕ್ಕಲಕೋಟೆ (TP) | 19 |
| 3 | ಬೆಳಗಾವಿ | 1 | ಅಥಣಿ | 394 |
| | | 2 | ಬೈಲಹೊಂಗಲ (TMC) | 161 |
| | | 3 | ಬೆಳಗಾವಿ | 2242 |
| | | 4 | ಚಿಕ್ಕೋಡಿ | 1257 |
| | | 5 | ಗೋಕಾಕ್ | 755 |
| | | 6 | ಪರಸಗುಡ್ಡ | 29 |
| | | 7 | ರಾಮದುರ್ಗ | 198 |
| | | 8 | ರಾಯ್‌ಭಾಗ | 294 |
| 4 | ಬೆಂಗಳೂರು ಗ್ರಾಮಾಂತರ | 1 | ದೊಡ್ಡಬಳ್ಳಾಪುರ | 24 |
| | | 2 | ಹೊಸಕೋಟೆ | 76 |
| | | 3 | ನೆಲಮಂಗಲ | 33 |
| | | 4 | ವಿಜಯಪುರ (TMC) | 48 |
| 5 | ಬೆಂಗಳೂರು ನಗರ | 1 | ಆನೇಕಲ್ | 75 |
| | | 2 | ಬೆಂಗಳೂರು (M Corp.) | 190 |
| | | 3 | ಬೆಂಗಳೂರು ಉತ್ತರ | 327 |
| | | 4 | ಬೆಂಗಳೂರು ದಕ್ಷಿಣ | 845 |
| 6 | ಬೀದರ್ | 1 | ಔರಾದ್ | 45 |
| | | 2 | ಬಸವಕಲ್ಯಾಣ | 15 |
| | | 3 | ಬಸವಕಲ್ಯಾಣ (TMC) | 396 |
| | | 4 | ಬಾಲ್ಕಿ | 189 |
| | | 5 | ಬೀದರ್ | 278 |
| | | 6 | ಚಿಟಗೊಪ್ಪ (TMC) | 24 |
| | | 7 | ಹುಮನಬಾದ್ | 200 |
| 7 | ಚಾಮರಾಜನಗರ | 1 | ಚಾಮರಾಜನಗರ | 305 |
| | | 2 | ಕೊಳ್ಳೇಗಾಲ | 1259 |
| | | 3 | ಕೊಳ್ಳೇಗಾಲ (TMC) | 666 |
| | | 4 | ಯಲ್ಲೂರು | 42 |

| ಕ್ರ.ಸಂ | ಜಿಲ್ಲೆಯ ಹೆಸರು | ಕ್ರ.ಸಂ | ತಾಲ್ಲೂಕು | ಕೈಮಗ್ಗ ನೇಕಾರರ ಸಂಖ್ಯೆ |
|---|---|---|---|---|
| 8 | ಚಿಕ್ಕಬಳ್ಳಾಪುರ | 1 | ಬಾಗೇಪಲ್ಲಿ | 215 |
| | | 2 | ಚಿಕ್ಕಬಳ್ಳಾಪುರ | 1 |
| | | 3 | ಚಿಂತಾಮಣಿ | 534 |
| | | 4 | ಗೌರಿಬಿದನೂರು | 57 |
| | | 5 | ಶಿಡ್ಲಘಟ್ಟ | 452 |
| 9 | ಚಿಕ್ಕಮಗಳೂರು | 1 | ಚಿಕ್ಕಮಗಳೂರು | 75 |
| | | 2 | ಕಡೂರು | 58 |
| | | 3 | ತರಿಕೇರಿ (TP) | 45 |
| 10 | ಚಿತ್ರದುರ್ಗ | 1 | ಚಳ್ಳಕೆರೆ | 2007 |
| | | 2 | ಚಿತ್ರದುರ್ಗ | 191 |
| | | 3 | ಹಿರಿಯೂರು | 556 |
| | | 4 | ಹೊಳಕೇರಿ | 148 |
| | | 5 | ಹೊಸದುರ್ಗ | 136 |
| | | 6 | ಮೊಳಕಾಲ್ಮೂರು | 1315 |
| | | 7 | ಮೊಳಕಾಲ್ಮೂರು (TP) | 515 |
| 11 | ದಕ್ಷಿಣ ಕನ್ನಡ | 1 | ಬೆಳ್ತಂಗಡಿ | 2 |
| | | 2 | ಮಂಗಳೂರು | 52 |
| | | 3 | ಮಂಗಳೂರು (M Corp.) | 4 |
| | | 4 | ಸುಳ್ಯ | 17 |
| 12 | ದಾವಣಗೆರೆ | 1 | ದಾವಣಗೆರೆ | 386 |
| | | 2 | ಹರಿಹರ | 137 |
| | | 3 | ಹೊನ್ನಳಿ | 30 |
| 13 | ಧಾರವಾಡ | 1 | ಧಾರವಾಡ | 532 |
| | | 2 | ಹುಬ್ಬಳ್ಳಿ | 180 |
| | | 3 | ಹುಬಳ್ಳಿ-ಧಾರವಾಡ (M Corp.) | 99 |
| | | 4 | ಕುಂದಗೋಳ | 69 |
| 14 | ಗದಗ | 1 | ಗದಗ | 139 |
| | | 2 | ಗದಗ-ಬೆಟಗೇರಿ (CMC) | 712 |
| | | 3 | ಗಜೇಂದ್ರಗಡ (TMC) | 922 |
| | | 4 | ನರಗುಂದ | 369 |
| | | 5 | ರೋಣ | 67 |
| | | 6 | ಶಿರಹಟ್ಟಿ | 508 |
| | | 7 | ಶಿರಹಟ್ಟಿ | 52 |
| 15 | ಹಾಸನ | 1 | ಅರಕಲಗೂಡು | 45 |
| | | 2 | ಅರಸೀಕೆರೆ | 476 |
| | | 3 | ಚನ್ನರಾಯಪಟ್ಟಣ | 149 |
| | | 4 | ಹೊಳೆನರಸೀಪುರ | 48 |
| 16 | ಹಾವೇರಿ | 1 | ಹಾವೇರಿ | 285 |
| | | 2 | ರಾಣೆಬೆನ್ನೂರು | 4367 |
| 17 | ಕಲಬುರಗಿ | 1 | ಅಫಜಪೂರ | 5 |
| | | 2 | ಆಳಂದ | 303 |
| | | 3 | ಚಿಂಚೋಳಿ | 215 |
| | | 4 | ಚಿತ್ತಪೂರ | 48 |
| | | 5 | ಗುಲಬರ್ಗಾ | 79 |
| | | 6 | ಜೆವರ್ಗಿ | 17 |
| | | 7 | ಸೇಡಂ | 64 |
| 18 | ಕೊಡಗು | 1 | ಸೋಮವಾರಪೇಟೆ | 29 |

| ಕ್ರ.ಸಂ | ಜಿಲ್ಲೆಯ ಹೆಸರು | ಕ್ರ.ಸಂ | ತಾಲ್ಲೂಕು | ಕೈಮಗ್ಗ ನೇಕಾರರ ಸಂಖ್ಯೆ |
|---|---|---|---|---|
| 19 | ಕೋಲಾರ | 1 | ಬಂಗಾರಪೇಟೆ | 30 |
| | | 2 | ಕೋಲಾರ | 6 |
| | | 3 | ಮುಳಬಾಗಿಲು | 59 |
| | | 4 | ಶ್ರೀನಿವಾಸಪುರ | 85 |
| 20 | ಕೊಪ್ಪಳ | 1 | ಕೊಪ್ಪಳ | 1063 |
| | | 2 | ಕುಷ್ಟಗಿ | 685 |
| | | 3 | ಯಲಬುರ್ಗಿ | 33 |
| 21 | ಮಂಡ್ಯ | 1 | ಕೃಷ್ಣರಾಜಪೇಟೆ | 12 |
| | | 2 | ಮಳವಳ್ಳಿ | 44 |
| | | 3 | ಮಂಡ್ಯ | 24 |
| | | 4 | ಪಾಂಡುಪುರ | 42 |
| | | 5 | ಶ್ರೀರಂಗಪಟ್ಟಣ | 46 |
| 22 | ಮೈಸೂರು | 1 | ಹೆಗ್ಗಡದೇವನಕೋಟೆ | 102 |
| | | 2 | ಹುಣಸೂರು | 60 |
| | | 3 | ನಂಜುನಗೂಡು | 81 |
| | | 4 | ಟಿ. ನರಸೀಪುರ | 158 |
| 23 | ರಾಯಚೂರು | 1 | ದೇವದುರ್ಗ (TP) | 25 |
| | | 2 | ರಾಯಚೂರು | 9 |
| 24 | ರಾಮನಗರ | 1 | ಕನಕಪುರ | 54 |
| | | 2 | ಮಾಗಡಿ | 47 |
| 25 | ಶಿವಮೊಗ್ಗ | 1 | ಹೊಸನಗರ | 26 |
| | | 2 | ಸಾಗರ | 115 |
| | | 3 | ಶಿಕಾರಿಪುರ | 58 |
| | | 4 | ಶಿವಮೊಗ್ಗ | 5 |
| | | 5 | ತೀರ್ಥಹಳ್ಳಿ | 14 |
| 26 | ತುಮಕೂರು | 1 | ಚಿಕ್ಕನಾಯಕನಹಳ್ಳಿ | 238 |
| | | 2 | ಚಿಕ್ಕನಾಯಕನಹಳ್ಳಿ (TMC) | 313 |
| | | 3 | ಗುಬ್ಬಿ | 899 |
| | | 4 | ಪಾವಗಡ | 3228 |
| | | 5 | ಶಿರಾ | 948 |
| | | 6 | ತಿಪಟೂರು | 560 |
| | | 7 | ತುರುವೇಕೆರೆ | 169 |
| 27 | ಉಡುಪಿ | 1 | ಕುಂದಪುರ | 13 |
| | | 2 | ಉಡುಪಿ | 25 |
| | | 3 | ಉಡುಪಿ (TMC) | 2 |
| 28 | ಉತ್ತರ ಕನ್ನಡ | 1 | ಹೊನ್ನಾವರ | 19 |
| | | 2 | ಮುಂಡಗೋಡ | 4 |
| | | 3 | ಯಲ್ಲಾಪುರ | 13 |
| 29 | ವಿಜಯಪುರ | 1 | ಬಸವನ ಬಾಗೇವಾಡಿ | 611 |
| | | 2 | ಬಿಜಾಪುರ | 56 |
| | | 3 | ಇಂಡಿ | 114 |
| | | 4 | ಮುದ್ದೆಬಿಹಾಳ | 397 |
| 30 | ಯಾದಗಿರಿ | 1 | ಶಹಾಪುರ | 334 |
| | | 2 | ಸುರಪುರ | 310 |
| | | 3 | ಯಾದಗಿರಿ | 312 |
| | ಒಟ್ಟು | | | 54791 |

ಜಂಟಿ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ

ಅನುಬಂಧ-2

## ಮಾನ್ಯ ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 233 ಕ್ಕೆ ಮಾಹಿತಿ

**2021-22ನೇ ಸಾಲಿನಲ್ಲಿ Academy of Management studies, Newdelhi (AMS) ಸಂಸ್ಥೆಯಿಂದ ಕೈಗೊಂಡಿರುವ ವಿದ್ಯುತ್ ಮಗ್ಗ ನೇಕಾರರ ಗಣತಿ ಪ್ರಕಾರ ರಾಜ್ಯದಲ್ಲಿನ ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ**

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 1 | ಬಾಗಲಕೋಟೆ | 94 |
| | | 2 | ಜಮಖಂಡಿ | 13483 |
| | | 3 | ಮುಧೋಳ | 1275 |
| | | 4 | ಬಾದಾಮಿ | 3609 |
| | | 5 | ಬೀಳಗಿ | 19 |
| | | 6 | ಹುನಗುಂದ | 5232 |
| | | 7 | ಇಳಕಲ್ | 2 |
| | | 8 | ರಬಕವಿ ಬನಹಟ್ಟಿ | 25 |
| | | 9 | ಗುಳೇದಗುಡ್ಡ | 9 |
| 2 | ಬೆಳಗಾವಿ | 1 | ಬೆಳಗಾವಿ | 12012 |
| | | 2 | ಅಥಣಿ | 6 |
| | | 3 | ಬೈಲಹೊಂಗಲ | 1923 |
| | | 4 | ಚಿಕ್ಕೋಡಿ | 4834 |
| | | 5 | ಗೋಕಾಕ್ | 76 |
| | | 6 | ಖಾನಾಪುರ | 13 |
| | | 7 | ರಾಯಬಾಗ | 26 |
| | | 8 | ಸವದತ್ತಿ | 134 |
| | | 9 | ರಾಮದುರ್ಗ | 4435 |
| | | 10 | ಹುಕ್ಕೇರಿ | 849 |
| | | 11 | ಕಿತ್ತೂರು | 379 |
| 3 | ಬೆಂಗಳೂರು ನಗರ | 1 | ಹೆಬ್ಬಾಳ | 24007 |
| | | 2 | ಕೆಂಗೇರಿ | |
| | | 3 | ಕೃಷ್ಣರಾಜಪುರ | |
| | | 4 | ಆನೇಕಲ್ | |
| | | 5 | ಯಲಹಂಕ | |
| 4 | ಬೆಂಗಳೂರು ಗ್ರಾಮಾಂತರ | 1 | ನೆಲಮಂಗಲ | 1376 |
| | | 2 | ದೊಡ್ಡಬಳ್ಳಾಪುರ | 14228 |
| | | 3 | ದೇವನಹಳ್ಳಿ | 1355 |
| | | 4 | ಹೊಸಕೋಟೆ | 676 |
| 5 | ಬೀದರ್ | 1 | ಭಾಲ್ಕಿ | 2 |
| 6 | ಚಾಮರಾಜನಗರ | 1 | ಚಾಮರಾಜನಗರ | 64 |
| | | 2 | ಕೊಳ್ಳೇಗಾಲ | 534 |
| | | 3 | ಯಳಂದೂರು | 76 |
| | | 4 | ಹನೂರು | 8 |
| 7 | ಚಿಕ್ಕಬಳ್ಳಾಪುರ | 1 | ಚಿಕ್ಕಬಳ್ಳಾಪುರ | 480 |
| | | 2 | ಬಾಗೇಪಲ್ಲಿ | 91 |
| | | 3 | ಚಿಂತಾಮಣಿ | 281 |
| | | 4 | ಗೌರಿಬಿದನೂರು | 47 |
| | | 5 | ಗುಡಿಬಂಡಾ | 15 |
| | | 6 | ಶಿಡ್ಲಘಟ್ಟ | 2408 |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ |
|---|---|---|---|---|
| 8 | ಚಿತ್ರದುರ್ಗ | 1 | ಚಳ್ಳಕೆರೆ | 36 |
| | | 2 | ಹಿರಿಯೂರು | 7 |
| | | 3 | ಹೊಸದುರ್ಗ | 43 |
| | | 4 | ಮೊಳಕಾಲ್ಮೂರು | 32 |
| 9 | ದಾವಣಗೆರೆ | 1 | ದಾವಣಗೆರೆ | 60 |
| | | 2 | ಹರಿಹರ | 6 |
| | | 3 | ಚನ್ನಗಿರಿ | 9 |
| | | 4 | ಹೊನ್ನಾಳಿ | 4 |
| 10 | ಧಾರವಾಡ | 1 | ಕಲಘಟಗಿ | 1 |
| | | 2 | ಧಾರವಾಡ | 98 |
| | | 3 | ಹುಬ್ಬಳ್ಳಿ (ಗ್ರಾಮೀಣ) | 305 |
| | | 4 | ಹುಬ್ಬಳ್ಳಿ (ನಗರ) | 3 |
| | | 5 | ಕುಂದಗೋಳ | 2 |
| 11 | ಗದಗ | 1 | ಗದಗ | 2965 |
| | | 2 | ನರಗುಂದ | 5 |
| | | 3 | ರೋಣ | 516 |
| | | 4 | ಲಕ್ಷ್ಮೇಶ್ವರ | 11 |
| | | 5 | ಶಿರಹಟ್ಟಿ | 676 |
| 12 | ಹಾಸನ | 1 | ಹಾಸನ | 351 |
| | | 2 | ಅರಸೀಕೆರೆ | 310 |
| | | 3 | ಚನ್ನರಾಯಪಟ್ಟಣ | 19 |
| | | 4 | ಹೊಳೆನರಸೀಪುರ | 22 |
| | | 5 | ಸಕಲೇಶಪುರ | 4 |
| | | 6 | ಆಲೂರು | 17 |
| | | 7 | ಅರಕಲಗೂಡು | 8 |
| | | 8 | ಬೇಲೂರು | 4 |
| 13 | ಹಾವೇರಿ | 1 | ರಾಣಿಬೆನ್ನೂರು | 636 |
| | | 2 | ಹಾವೇರಿ | 25 |
| | | 3 | ಹಿರೇಕೆರೂರು | 4 |
| | | 4 | ಶಿಗ್ಗಾವಿ | 4 |
| 14 | ಕಲಬುರಗಿ | 1 | ಕಲಬುರಗಿ | 10 |
| | | 2 | ಆಳಂದ | 2 |
| | | 3 | ಚಿತಾಪುರ | 15 |
| 15 | ಕೊಡಗು | 1 | ವಿರಾಜಪೇಟೆ | 14 |
| | | 2 | ಪೊನ್ನಮ್ಮಪೇಟೆ | 2 |
| 16 | ಕೋಲಾರ | 1 | ಕೋಲಾರ | 459 |
| | | 2 | ಬಂಗಾರಪೇಟೆ | 1 |
| | | 3 | ಮಾಲೂರು | 37 |
| | | 4 | ಮುಳಬಾಗಿಲು | 27 |
| | | 5 | ಶ್ರೀನಿವಾಸಪುರ | 54 |
| | | 6 | ಕೋಲಾರ ಗೋಲ್ಡ್ ಫೀಲ್ಡ್ಸ್ (ರಾಬರ್ಟ್ ಸನ್‌ಪೇಟೆ) | 11 |
| 17 | ಕೊಪ್ಪಳ | 1 | ಕೊಪ್ಪಳ | 1407 |
| | | 2 | ಗಂಗಾವತಿ | 2 |
| | | 3 | ಕುಷ್ಟಗಿ | 127 |
| 18 | ಮಂಡ್ಯ | 1 | ಮಂಡ್ಯ | 29 |
| | | 2 | ಮದ್ದೂರು | 5 |
| | | 3 | ಮಳವಳ್ಳಿ | 18 |
| | | 4 | ಶ್ರೀರಂಗಪಟ್ಟಣ | 467 |
| | | 5 | ಕೃಷ್ಣರಾಜಪೇಟೆ | 124 |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ |
|---|---|---|---|---|
| 19 | ಮೈಸೂರು | 1 | ಮೈಸೂರು | 120 |
| | | 2 | ನಂಜನಗೂಡು | 1 |
| 20 | ರಾಮನಗರ | 1 | ರಾಮನಗರ | 1291 |
| | | 2 | ಮಾಗಡಿ | 4613 |
| | | 3 | ಕನಕಪುರ | 696 |
| | | 4 | ಚನ್ನಪಟ್ಟಣ | 310 |
| 21 | ಶಿವಮೊಗ್ಗ | 1 | ಶಿವಮೊಗ್ಗ | 56 |
| | | 2 | ಹೊಸನಗರ | 1 |
| | | 3 | ಸೊರಬ | 1 |
| 22 | ತುಮಕೂರು | 1 | ತುಮಕೂರು | 62 |
| | | 2 | ಚಿಕ್ಕನಾಯಕನಹಳ್ಳಿ | 312 |
| | | 3 | ಕುಣಿಗಲ್ | 38 |
| | | 4 | ಮಧುಗಿರಿ | 7 |
| | | 5 | ಶಿರಾ | 4 |
| | | 6 | ತಿಪಟೂರು | 4784 |
| | | 7 | ಗುಬ್ಬಿ | 1000 |
| | | 8 | ಕೊರಟಗೆರೆ | 15 |
| | | 9 | ಪಾವಗಡ | 341 |
| | | 10 | ತುರುವೇಕೆರೆ | 297 |
| 23 | ಉತ್ತರ ಕನ್ನಡ | 1 | ಅಂಕೋಲಾ | 6 |
| | | 2 | ಯಲ್ಲಾಪುರ | 11 |
| 24 | ವಿಜಯಪುರ | 1 | ವಿಜಯಪುರ | 19 |
| | | 2 | ಬಸವನ ಬಾಗೇವಾಡಿ | 37 |
| ಒಟ್ಟು | | | | 117099 |

ಜಂಟಿ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ

# ಅನುಬಂಧ-3

## ಮಾನ್ಯ ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 233 ಕ್ಕೆ ಮಾಹಿತಿ

- ಸರ್ಕಾರದ ಆದೇಶ ಸಂಖ್ಯೆ: ವಾಕೈ/21/ಜಕೈಯೋ/213(ಭಾಗ), ಬೆಂಗಳೂರು ದಿನಾಂಕ: 02-12-2013 ರನ್ವಯ ನೇಕಾರರು ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ದಿನಾಂಕ: 01-08-2011 ರಿಂದ 25-07-2012 ರವರೆಗೆ ಪಡೆದು ದಿನಾಂಕ: 25-07-2012 ಕ್ಕೆ ಬಾಕಿ ಇರುವ ನೇಕಾರರ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು / ಪಟ್ಟಣ ಸಹಕಾರ ಬ್ಯಾಂಕ್‌ಗಳಿಂದ ಪಡೆದ ರೂ.25,000/- ರವರೆಗಿನ ಅಸಲು ಮತ್ತು ಬಡ್ಡಿ ಹಾಗೂ ರೂ.25,000/- ರ ಮೇಲ್ಪಟ್ಟ ಮೊತ್ತದ ಸಾಲದಲ್ಲಿ ರೂ.25,000/- ರವರೆಗಿನ ಸಾಲದ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. (ವಿವರ ಈ ಕೆಳಕಂಡಂತಿವೆ)

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಸಂಸ್ಥೆ/ ಸಂಘ/ಬ್ಯಾಂಕ್ ಗಳ ಸಂಖ್ಯೆ | ನೇಕಾರರ ಸಂಖ್ಯೆ | ಬಿಡುಗಡೆ ಮಾಡಲಾಗಿರುವ ಒಟ್ಟು ಮೊತ್ತ |
|---|---|---|---|---|
| 1 | 2013-14 | 122 | 9494 | 1758.06 |
| 2 | 2015-16 | 40 | 798 | 167.00 |
| | ಒಟ್ಟು | 162 | 10292 | 1925.06 |

- ಸರ್ಕಾರದ ಆದೇಶ ಸಂಖ್ಯೆ ವಾಕೈ 57 ಜಕೈಯೋ 2017 ಬೆಂಗಳೂರು, ದಿನಾಂಕ: 13.12.2017, 29.01.2018, 20.02.2018 ಮತ್ತು 24.03.2018 ಗಳನ್ವಯ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು / ಸಹಕಾರಿ ಸಂಸ್ಥೆಗಳಿಂದ ಸಾಲ ಪಡೆದು ದಿನಾಂಕ:30.06.2017 ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ.50,000/- ಗಳ ವರೆಗಿನ ಸಾಲ ಮತ್ತು ಬಡ್ಡಿ ಮನ್ನಾ ಉದ್ದೇಶಕ್ಕಾಗಿ ಬಿಡುಗಡೆ ಮಾಡಿರುವ ವರ್ಷವಾರು ವಿವರ ಈ ಕೆಳಕಂಡಂತಿದೆ. (ವಿವರ ಈ ಕೆಳಕಂಡಂತಿವೆ)

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಸಹಕಾರ ಸಂಘ / ಸಹಕಾರ ಬ್ಯಾಂಕ್‌ಗಳ ಸಂಖ್ಯೆ | ಅರ್ಹ ನೇಕಾರರ ಫಲಾನುಭವಿಗಳ ಸಂಖ್ಯೆ | ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡಲಾದ ಮೊತ್ತ |
|---|---|---|---|---|
| 1 | 2017-18 | 14 | 2154 | 650.57 |
| 2 | 2018-19 | 82 | 7459 | 2080.67 |
| 3 | 2019-20 | 121 | 5174 | 1429.35 |
| | ಒಟ್ಟು | 217 | 14787 | 4160.59 |

- ಸರ್ಕಾರದ ಆದೇಶ ಸಂಖ್ಯೆ: ವಾಕೈ 15 ಜಕೈಯೋ 2019 ದಿನಾಂಕ: 02.08.2019 ರ ಪ್ರಕಾರ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು / ಸಹಕಾರಿ ಬ್ಯಾಂಕ್‌ಗಳಿಂದ ದಿನಾಂಕ: 26.07.2012 ರಿಂದ ಸಾಲ ಪಡೆದು ದಿನಾಂಕ: 31.03.2019 ಕ್ಕೆ ಹೊಂದಿದ್ದ ಹೊರಬಾಕಿಯಲ್ಲಿ ರೂ.1,00,000/- ಗಳವರೆಗಿನ ಸಾಲ (ಅಸಲು ಮತ್ತು ಬಡ್ಡಿ ಸೇರಿ) ಮನ್ನಾ ಆದೇಶವನ್ನು ಹೊರಡಿಸಲಾಗಿರುತ್ತದೆ.

- ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: CI 15 JAKY ಬೆಂಗಳೂರು, ದಿನಾಂಕ: 03.10.2022 ರನ್ವಯ ನೇಕಾರರಿಗೆ ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು / ಸಹಕಾರ ಬ್ಯಾಂಕ್ ಗಳಿಂದ ಸಾಲ ಪಡೆದು ದಿನಾಂಕ: 31.03.2019 ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ನೇಕಾರರ ರೂ.1.00 ಲಕ್ಷಗಳವರೆಗಿನ ಕ್ಯಾಶ್ ಕ್ರೆಡಿಟ್ ಸಾಲವನ್ನೂ ಸಹ ಸಾಲಮನ್ನಾ ಯೋಜನೆಯಡಿ ಪರಿಗಣಿಸಲು ಆದೇಶಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ವರ್ಷ | ಸಹಕಾರ ಸಂಘ / ಸಹಕಾರ ಬ್ಯಾಂಕ್ ಗಳ ಸಂಖ್ಯೆ | ಅರ್ಹ ನೇಕಾರರ ಫಲಾನುಭವಿಗಳ ಸಂಖ್ಯೆ | ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡಲಾದ ಮೊತ್ತ |
|---|---|---|---|---|
| 1 | 2019-20 | 82 | 4591 | 1842.65 |
| 2 | 2020-21 | 316 | 15800 | 5755.42 |
| 3 | 2022-23 | 34 | 1616 | 163.39 |
| 4 | 2022-23 ಕ್ಯಾಶ್ ಕ್ರೆಡಿಟ್ ಸಾಲಮನ್ನಾ | 11 | 303 | 198.05 |
| | **ಒಟ್ಟು** | **443** | **22310** | **7959.51** |

ಜಂಟಿ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ